ಎಲ್ಲರೂ ಮುಳುಗುವ ಭೀತಿ ಎದುರಾದಾಗ ನಗನಾಣ್ಯ ತುಂಬಿದ ಕಬ್ಬಿಣದ ಎರಡು ಪೆಠಾರಿಗಳನ್ನು ಹಿಂದುಮುಂದೆ ನೋಡದೆ ಗೌಡರು ನೀರಿಗೆ ಎಸೆಯುತ್ತಾರೆ! ಆದರೂ ದೋಣಿ ಭಾರವನ್ನು ತಾಳದೆ ತೂರಾಡುತ್ತಿದ್ದಾಗ, ಗೌಡರು ತೋರಿದ ಔದಾರ್ಯಕ್ಕೆ ಪ್ರತಿಯಾಗಿ ಲಿಂಗನು ಸ್ವತಃ ತಾನೇ ಹರಿಯುವ ನೆರೆಗೆ ಧುಮುಕುವ ಮೂಲಕ ದೋಣಿಯ ಭಾರವನ್ನು ಕಡಿಮೆ ಮಾಡಿ ಅದು ಸುರಕ್ಷಿತವಾಗಿ ದಡ ತಲುಪಲು ನೆರವಾಗುತ್ತಾನೆ. ಈ ಮೂಲಕ ಅವನು ಗೌಡರು ತೋರಿದ ಔದಾರ್ಯಕ್ಕೆ ಪ್ರತಿಯಾಗಿ ತನ್ನ ಜೀವವನ್ನೇ ಲೆಕ್ಕಿಸದೆ ತನ್ನ ಪಾಲಿನ ಸೇವೆಯನ್ನು ಸಲ್ಲಿಸುತ್ತಾನೆ. ಇಲ್ಲಿ ಗಮನಿಸಬೇಕಾದದ್ದು, ಗೌಡರು ನೀರಿಗೆ ಚೆಲ್ಲಿದ್ದು ತಮ್ಮನ್ನು ಸಮಾಜದಲ್ಲಿ ಶ್ರೀಮಂತರನ್ನಾಗಿ ಮಾಡಿದ ಪ್ರತೀಕವಾದ ಚಿನ್ನ ಬೆಳ್ಳಿ ವಡವೆ ದುಡ್ಡು ಕಾಸಿನ ಪೆಠಾರಿಗಳನ್ನು. ಆದರೆ ಲಿಂಗ ಸಮರ್ಪಿಸಿದ್ದು ಸ್ವತಃ ತನ್ನನ್ನೇ! ಅದೂ ಲಿಂಗನ ಹೆಚ್ಚುಗಾರಿಕೆ ಇರುವುದು ಅವನ ಈ ಕಾರ್ಯವನ್ನ ಯಾರಿಗೂ ತಿಳಿಯದಂತೆ ಮಾಡುವುದರಲ್ಲಿ! ಹಾಗಾಗಿಯೇ ಕತೆಯ ಶೀರ್ಷಿಕೆ 'ಯಾರೂ ಅರಿಯದ ವೀರ!'

ಕುವೆಂಪು ಅವರ ಮೇಲಿನ ಕಥೆ ಕನ್ನಡದ ಒಂದು ಆದರ್ಶದಾಯಕವಾದ ಕಥೆಯಾದರೆ, ಮತ್ತೊಂದು ದೇವನೂರ ಮಹಾದೇವ ಅವರ 'ಮೂಡಲ ಸೀಮೇಲಿ ಕೊಲೆಗಿಲೆ' ಮುಂತಾಗಿ ಎಂಬ ಕಥೆಯನ್ನು ಇನ್ನೊಂದು ದಿಕ್ಕಿನಿಂದ ನೋಡಬಹುದು. ಇಲ್ಲಿ ಗೌಡ ಹಾಗೂ ರಂಗನ ನಡುವೆ ಅಂತಹ ಮಾನವೀಯ ಸಂಬಂಧವೇನೂ ಇಲ್ಲ. ಬದಲಾಗಿ ರಂಗನನ್ನು ಬರಿದೆ ತನಗಾಗಿ ಬಳಸಿಕೊಳ್ಳುವ ಒಬ್ಬ ಶೋಷಕ ಗೌಡ ಮಾತ್ರ ಇಲ್ಲಿದ್ದಾನೆ. ಈ ಕಥೆಯ ವಿಶೇಷವೆಂದರೆ, ಇಲ್ಲಿ ಎಲ್ಲೂ ಕೂಡ ಗೌಡ ನೇರವಾಗಿ ಎದುರಾಗುವುದೇ ಇಲ್ಲ. ಅವನ ಅನುಪಸ್ಥಿತಿಯಲ್ಲಿ ಗೌಡನ ಹೆಚ್ಚುಗಾರಿಕೆಯನ್ನು ಊರಿನಲ್ಲಿ ಲೈಟು ಬರುವಲ್ಲಿಂದ ಹಿಡಿದು ನಾನಾ ಕಡೆ ಸ್ವತಃ ರಂಗ ಗಮನಿಸುತ್ತ ಹೋಗುತ್ತಾನೆ. ಗೌಡರು ಯಾವಾಗ ಬೇಕೋ ಆವಾಗ ತಮ್ಮ ಕೈಗೆ ನಿಲುಕುವ ಸಾದಾ ಆಸಾಮಿಯಲ್ಲ, ಅವರೊಬ್ಬ ದೊಡ್ಡ ವ್ಯಕ್ತಿ ಎಂಬುದು, ರಂಗ 'ಗೌಡರು ಊರಲ್ಲಿ ಇದ್ದಾರೋ ಇಲ್ವೋ...' ಎಂದು ಹೊರಡಿಸುವ ಪ್ರತಿ ಉದ್ಗಾರದಲ್ಲೂ ಒಡಮೂಡುತ್ತದೆ. ಹಾಗಾಗಿ ಇಲ್ಲಿ ಗೌಡ ಮತ್ತು ರಂಗನ ನಡುವಿನ ಮಾನವೀಯ ಸಂಬಂಧ ಏಕಮುಖಿಯಾದದ್ದು ಅದು ಬರೀ ರಂಗ ಗೌಡನ ಮನೆಗೆ, ಮನೆತನಕ್ಕೆ ತನ್ನ ಉಸಿರಿರುವ ತನಕ ಕೊಡುವ ಸಮ್ಮಾನ. ಆದರೆ ಅದೇ ಗೌಡನ ಕಡೆಯಿಂದ ಇದನ್ನು ಅವನು ಒಂದಿನಿತೂ ನಿರೀಕ್ಷಿಸುವ ಹಾಗಿಲ್ಲ. ಅವನು ಕೊಟ್ಟಾಗ ಪಡೆಯಬೇಕು;



ಲಿಂಗ ಸಮರ್ಪಿಸಿದ್ದು ಸ್ವತಃ ತನ್ನನ್ನೇ! ಅದೂ ಲಿಂಗನ ಹೆಚ್ಚುಗಾರಿಕೆ ಇರುವುದು ಅವನ ಈ ಕಾರ್ಯವನ್ನ ಯಾರಿಗೂ ತಿಳಿಯದಂತೆ ಮಾಡುವುದರಲ್ಲಿ! ಹಾಗಾಗಿಯೇ ಕತೆಯ ಶೀರ್ಷಿಕೆ 'ಯಾರೂ ಅರಿಯದ ವೀರ!'